ರುಚಿಕರವಾದ ಉಪಹಾರ
ಸಿಹಿ – ಖಾರ ತಿಂಡಿಗಳು
ನ್ಯೂ ಕೋರ್ಟ್ ರೆಸ್ಟೋರೆಂಟ್
ಹೊಸ ಬಸ್‌ಸ್ಟ್ಯಾಂಡ್ ಬಳಿ
ಕುಂದಾಪುರ
ಫೋ : 232878

www.kundaprabha.com e-mail : kundaprabha@gmail.com

# ಕುಂದಪ್ರಭ

ವಾರಪತ್ರಿಕೆ

ಸ್ಥಾಪನೆ : 1948
SJ
6 ದಶಕಗಳ ವಿಶ್ವಾಸನೀಯ ಸೇವೆಯಲ್ಲಿ
ಶೇಟ್ ಜ್ಯುವೆಲ್ಲರ್ಸ್
ಶಂಕರ್ ಶೇಟ್ ಬಿಲ್ಡಿಂಗ್
ಮುಖ್ಯರಸ್ತೆ, ಕುಂದಾಪುರ
ಫೋನ್ : 230242

॥ ಸಂಪುಟ : 26 ॥ ಸಂಚಿಕೆ : 16॥ Udp/1263/2015-17 || R.NO.50495/91 ॥ ತಾರೀಕು : 03–05–2016 ॥ ರೂ 5/– ॥ ವಾರ್ಷಿಕ ಚಂದಾ : 300/– ಅಂಚೆಯಲ್ಲಿ : 350/

## ಯುವ ಮೆರಿಡಿಯನ್‌ನಲ್ಲಿ ಹೆಲಿಟೂರಿಸಂ



## ಮಳೆನೀರು ಸಂಗ್ರಹದ ಬಗ್ಗೆ ಜಾಗ್ರತಿ

ಈ ವರ್ಷದ ತಾಪಮಾನ ಹಾಗೂ ಕುಡಿಯುವ ನೀರಿಗೂ ಉಂಟಾಗಿರುವ ಸಮಸ್ಯೆ ಗಮನಿಸಿ ಕರಾವಳಿಯಲ್ಲಿ ಹಲವು ಕಡೆ ಮಳೆನೀರು ಸಂಗ್ರಹದ ಬಗ್ಗೆ ಜಾಗ್ರತಿ ಮೂಡಿಸುವ ಕಾರ್ಯಕ್ರಮಗಳು ನಡೆಯುತ್ತಿವೆ.

## ವಕ್ವಾಡಿ ಗುರುಕುಲದಲ್ಲಿ ಸ್ವಾಮಿ ವಿವೇಕಾನಂದರ ಪುತ್ಥಳಿ



# ಅಕ್ಕಯ್ಯನ ಹತ್ಯೆಗೆ ಸತೀಶ್‌ನಿಗೆ ಗಲ್ಲುಶಿಕ್ಷೆ

‘ಇನ್ನೂ ಬದುಕನ್ನು ಕಟ್ಟಿಕೊಳ್ಳ ಬೇಕಾಗಿದ್ದ ಅಮಾಯಕ ಯುವತಿಯನ್ನು ನಂಬಿಸಿ ಬರ್ಬರವಾಗಿ ಹತ್ಯೆ ಮಾಡಿರುವ ಆರೋಪಿಯಾದ ಸತೀಶ್ ಪೂಜಾರಿಗೆ ಈ ನ್ಯಾಯಾಲಯವು ಮರಣದಂಡನೆಯನ್ನು ನೀಡುತ್ತಿದೆ". ಹಾಗಂತ ಕುಂದಾಪುರ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶರಾದ ರಾಜಶೇಖರ ವಿ. ಪಾಟೀಲ್ ತಮ್ಮ ತೀರ್ಪನ್ನು ಘೋಷಿಸಿದಾಗ ಪಶ್ಚಿಮದ ಅಂಚಿನಲ್ಲಿ ಆಗ ತಾನೇ ಸೂರ್ಯ ಲಗುಬಗೆಯಿಂದ ಸರಿದು ಹೋಗುತಲಿದ್ದ. ಜಿಲ್ಲೆಯಲ್ಲಿಯೇ ಪ್ರಪ್ರಥಮ ಈ ಐತಿಹಾಸಿಕ ಜೀವದಂಡನೆಯ ತೀರ್ಪನ್ನು ಬರೆಯಲು ಬಳಸಿದ ಲೇಖನಿಯನ್ನು ಇನ್ನೆಂದೂ ಬಳಸಲಾಗದಂತೆ ಅದರ ಮೊನೆಯನ್ನೇ ಟೇಬಲಿಗೆ ತಿರುಚಿ ಮುರಿದು ಹಾಕಿದ ನ್ಯಾಯಾಧೀಶರು ತನ್ನ ಆಸನದಿಂದ ಎದ್ದು



ನಿಂತಾಗ ಇಡೀ ನ್ಯಾಯಾಲಯದ ಅವರಣದಲ್ಲಿಯೇ ಅಚ್ಚರಿ, ಆತಂಕ, ಕಳವಳ, ದಿಗ್ಭ್ರಮೆಯ ಮೌನ . ಒಂದು ಹತ್ಯೆಗೆ ಸಂಬಂಧ ಪಟ್ಟ ಈ ಪ್ರಕರಣ ಅಪರೂಪದಲ್ಲಿ ಅಪರೂಪದ ಹತ್ಯಾ ಪ್ರಕರಣವಾಗಿರದಿದ್ದರೂ, ತೀರ್ಪು ಮಾತ್ರ ಇಡೀ ಉಡುಪಿ ಜಿಲ್ಲೆಯ ಇತಿಹಾಸದಲ್ಲಿಯೇ ಪ್ರಥಮವಾಗಿ ನ್ಯಾಯಾಲಯದಿಂದ ಮೊಳಗಿದ ಐತಿಹಾಸಿಕ ಅಪರೂಪದ ತೀರ್ಪಾಗಿದ್ದಿತು.

ಅಂದ ಹಾಗೆ ಇಂದಿಗೆ ಸರಿಸುಮಾರು ಆರು ವರ್ಷಗಳ ಹಿಂದೆ ಸಮೀಪದ ನೂಜಾಡಿಯ ಯುವತಿಯೊರ್ವಳ ಹತ್ಯೆಗೆ ಸಂಬಂಧಿಸಿದ ಆರೋಪಿಯೊರ್ವನಿಗೆ ಯಾವುದೇ ಕಾನೂನು ತಜ್ಞರು ಊಹಿಸದ ರೀತಿಯಲ್ಲಿ ನ್ಯಾಯಾಲಯದ ಅಂಗಳದಿಂದ ಚಿಮ್ಮಿ ಬಂದ ತೀರ್ಪಿನ ಪುಟಗಳನ್ನು ಹಿಂತಿರುವಿದಾಗ ಹಿಂದಿನ ಕತೆ ತೆರೆದುಕೊಳ್ಳುತ್ತದೆ.

ಅನ್ಯಾಯವಾಗಿ ಹತ್ಯೆಗೀಡಾದವಳು ನೂಜಾಡಿಯ ನಿವಾಸಿ ಅಕ್ಕಯ್ಯ ಯಾನೆ ಲತಾ(27) ಮತ್ತು ಆಕೆಯ ಹತ್ಯಾ ಆರೋಪವನ್ನು ಹೊತ್ತು ನ್ಯಾಯಾಲಯದ ಕಟಕಟೆಯಲ್ಲಿ ಕೈಕಟ್ಟಿ ನಿಂತವನು



ಹೆಮ್ಮಾಡಿಯ ನಿವಾಸಿ ಸತೀಶ್ ಪೂಜಾರಿ(36)

ಅವಳು ನೂಜಾಡಿಯ ಬಳಿಯ ಬಡಕುಟುಂಬದ ಯುವತಿ ಅಕ್ಕಯ್ಯ ಯಾನೆ ಲತಾ, ಮನೆಯಲ್ಲಿ ಬಡತನ ಮುರಿದು ಬಿದ್ದಿತು. ಒಂದೊಮ್ಮೆ ಬೀಡಿ ಕಟ್ಟುತ್ತಿದ್ದ ಲತಾ ಹರೆಯಕ್ಕೆ ಬಂದ ಹಾಗೆ

(6ನೇ ಪುಟಕ್ಕೆ)

# ‘ಎಕ್ಸಲೆಂಟ್’ ಕಾಲೇಜಿನ ಯಶಸ್ಸಿನ ಗುಟ್ಟು

ಬಹುತೇಕ ಮಂದಿ ಕುಂದಾಪುರ ತಾಲ್ಲೂಕಿನ ಸುಣ್ಣಾರಿಯಲ್ಲಿರುವ ಎಕ್ಸ್‌ಲೆಂಟ್ ಕಾಲೇಜಿನ ಯಶಸ್ಸಿನ ಗುಟ್ಟು ಏನು ಎಂದು ಕೇಳುತ್ತಾರೆ. ಈ ಕಾಲೇಜಿನ ಯಶಸ್ಸಿನಲ್ಲಿ ಗುಟ್ಟೇನಿಲ್ಲ. 16 ರಿಂದ 18 ರ ವಯೋಮಾನ ಜೀವನದಲ್ಲಿ ಒಂದು ಪ್ರಮುಖ ಘಟ್ಟ. ಸರಿಯಾದ ಮಾರ್ಗದರ್ಶನ ಉತ್ತಮ ಕಲಿಕಾ ವಾತಾವರಣ, ಶಿಸ್ತಿನ ಕ್ಯಾಂಪಸ್ ಎಕ್ಸಲೆಂಟ್ ಕಾಲೇಜಿನಲ್ಲಿದೆ. ವಿದ್ಯಾರ್ಥಿಗಳಿಗೆ ಅಗತ್ಯವಾದ ಎಲ್ಲ ಸೌಲಭ್ಯ ಗಳೂ ಕಾಲೇಜಿನ ಕ್ಯಾಂಪಸ್‌ನಲ್ಲಿ ದೊರೆಯುವುದರಿಂದ ವಿದ್ಯಾರ್ಥಿಗಳು ಸಂಜೆ ತನಕ ಕಾಲೇಜಿನ ಹೊರಗಡೆ ಹೋಗುವ ಆಸಕ್ತಿ ಹೊಂದಿರುವುದಿಲ್ಲ. ಅವರ ಕಲಿಕಾ ಮನೋಭಾವ ಬೆಳೆಯುತ್ತದೆ. ಸ್ಫೂರ್ತಿ ಪ್ರೇರಣೆ ಇಲ್ಲಿಯೇ ದೊರಕುತ್ತದೆ.

ಆಕರ್ಷಕ ಕ್ಯಾಂಪಸ್, ಅತ್ಯುತ್ತಮ ಸೌಲಭ್ಯಗಳು, ಶಿಕ್ಷಕರಿಂದ ಉತ್ತಮ ತರಬೇತಿ ಇದೇ ತಾನೇ ವಿದ್ಯಾರ್ಥಿಗಳಿಗೆ ಬೇಕಾಗುವುದು?

ವಿಶಾಲ ತರಗತಿ ಕೋಣೆಗಳು, ಅತ್ಯಾಧುನಿಕ ಪ್ರಯೋಗಾಲಯ, ಉತ್ತಮ ಗುಣಮಟ್ಟದ ಹಾಸ್ಟೆಲ್ ಮನೆಯಿಂದ ಕಾಲೇಜಿಗೆ ಬರುವವರಿಗಾಗಿ ಬಸ್ ಸೌಕರ್ಯ, ತಜ್ಞರಿಂದ ತರಬೇತಿ, ವಿಜ್ಞಾನ ಹಾಗೂ ವಾಣಿಜ್ಯ ಎರಡೂ ವಿಭಾಗಗಳಿಗೆ ಮಹತ್ವ ನೀಡಲಾಗುತ್ತಿದೆ.

**ಎಕ್ಸಲೆಂಟ್‌ನ ವಿಶೇಷತೆ:** ಎಲ್ಲಾ ವರ್ಷಗಳಲ್ಲಿ ಶೇಕಡಾ ನೂರು ಫಲಿತಾಂಶ ದೊಂದಿಗೆ 50% ವಿದ್ಯಾರ್ಥಿಗಳು ವಿಶೇಷ ಶ್ರೇಣಿ (ಡಿಸ್ಟಿಂಕ್ಷನ್) ನಲ್ಲೂ, 100 ಶೇಕಡಾ ಪ್ರಥಮ ದರ್ಜೆಯಲ್ಲೂ, ಪಾಸಾಗಿರುತ್ತಾರೆ. ಹಾಗೂ ಸ್ಪರ್ಧಾತ್ಮಕ ಪರೀಕ್ಷಾ ಕ್ಷೇತ್ರದಲ್ಲಿ ದೊಡ್ಡ ಸಾಧನೆ ಮಾಡಿದೆ. ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ 50% ಕ್ಕಿಂತ ಕಡಿಮೆ ಅಂಕ ಪಡೆದವರು ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ತಮ್ಮ ಅಂಕಗಳನ್ನು ದ್ವಿಗುಣಗೊಳಿಸಿದ್ದು, ಕಾಲೇಜಿನ ಸಾಧನೆ. ವಿಜ್ಞಾನದ ವಿದ್ಯಾರ್ಥಿಗಳ ಮೇಲಿನ ಒತ್ತಡ ಕಡಿಮೆ ಮಾಡಲು ವಿದ್ಯಾರ್ಥಿಗಳ ಅಮೂಲ್ಯ ಸಮಯವನ್ನು ಹಾಳುಮಾಡದೇ ಪಾಠಗಳ ಜೊತೆಗೆ ಸಿ.ಇ.ಟಿ., ಜೆ.ಇ.ಇ.(ಮೈನ್), ಜೆ.ಇ.ಇ.(ಅಡ್ವಾನ್ಸ್), AIPMT ಮುಂತಾದ ತರಗತಿಗಳನ್ನು ಕಾಲೇಜಿನ ಅವಧಿಯಲ್ಲಿಯೇ ನಡೆಸಲಾಗುತ್ತಿದೆ. ಇದರಿಂದ ವಿದ್ಯಾರ್ಥಿಗಳಿಗೆ ಸ್ವ ಅಧ್ಯಯನಕ್ಕೆ ವಿಫುಲ ಅವಕಾಶ ದೊರಕುತ್ತಿದೆ. ಶೈಕ್ಷಣಿಕವಾಗಿ ಅತಿ ಹಿಂದುಳಿದ ರಾಜ್ಯ ಬಿಹಾರದ ಚಿಕ್ಕ ಗ್ರಾಮವೊಂದರ ಅತಿ ಹೆಚ್ಚಿನ ವಿದ್ಯಾರ್ಥಿಗಳು ಸ್ವ ಅಧ್ಯಯನದಿಂದ ಜೆ.ಇ.ಇ. (ಅಡ್ವಾನ್ಸ್) ಪರೀಕ್ಷೆಯಲ್ಲಿ ಸಫಲರಾಧ ವಿಚಾರ ನಮಗೆಲ್ಲರಿಗೂ ಸ್ವ ಅಧ್ಯಯನದ ಮಹತ್ವವನ್ನು ತಿಳಿಸುತ್ತದೆ.

ಈ ಪ್ರಯೋಗವನ್ನು ನಮ್ಮ ಕಾಲೇಜಿನಲ್ಲಿ ಅಳವಡಿಸಿಕೊಂಡು ಕಾಲೇಜಿನಲ್ಲಿಯೇ ಎಲ್ಲಾ ಪರೀಕ್ಷೆಗಳ ತಯಾರಿ ನಡೆಸುವುದರಿಂದ ನಮ್ಮ ವಿದ್ಯಾರ್ಥಿಗಳು 8 ರಿಂದ 10 ಗಂಟೆಯ ಸ್ವ ಅಧ್ಯಯನ ಅವಕಾಶವನ್ನು ಪಡೆಯುತ್ತಿದ್ದಾರೆ. ಆಗಸ್ಟ್ ತಿಂಗಳೊಳಗೆ ಎಲ್ಲಾ ಪಠ್ಯ ಕ್ರಮಗಳನ್ನು ಮುಗಿಸಿ ಸಪ್ಟೆಂಬರ್‌ನಲ್ಲೇ ಪ್ರಥಮ ಪೂರ್ವ ಸಿದ್ಧತಾ ಪರೀಕ್ಷೆಗಳನ್ನು ನಡೆಸಲಾಗುತ್ತಿದೆ. ಪ್ರತಿ ವಿಷಯಗಳ ನಡುವೆ 5 ದಿನಗಳ ಬಿಡುವು ಇದ್ದು ಈ ಪರೀಕ್ಷೆಗಳು ಸಪ್ಟೆಂಬರ್ ನಲ್ಲಿ ನಡೆಸಿದರೆ, ಅಕ್ಟೋಬರ್‌ನಲ್ಲಿ ಪ್ರತಿ ವಿಷಯಗಳ ನಡುವೆ 3 ದಿನಗಳ ಬಿಡುವಿನಲ್ಲಿ ಎರಡನೇ ಪೂರ್ವಸಿದ್ಧತಾ ಪರೀಕ್ಷೆ. ನವೆಂಬರ್–ಡಿಸೆಂಬರ್‌ನಲ್ಲಿ 2 ದಿನಗಳ ಬಿಡುವಿನಲ್ಲಿ ಮೂರನೇ ಪೂರ್ವ ಸಿದ್ಧತಾ ಪರೀಕ್ಷೆ ನಡೆಸಲಾಗುತ್ತದೆ. ಅಲ್ಲದೇ ಇಲಾಖೆ ನಡೆಸುವ ಜಿಲ್ಲಾ, ರಾಜ್ಯ ಮಟ್ಟದ ಪೂರ್ವ ಸಿದ್ಧತಾ ಪರೀಕ್ಷೆಗಳನ್ನು ನಡೆಸಲಾಗುತ್ತದೆ. ಹೀಗೆ 5 ಪೂರ್ವ ಸಿದ್ಧತಾ ಪರೀಕ್ಷೆಗಳನ್ನು ಮತ್ತು ನಿಗದಿತ ಕಿರು ಪರೀಕ್ಷೆಗಳನ್ನು ಎದುರಿಸುತ್ತಾ ವಿದ್ಯಾರ್ಥಿಗಳು ಪರಿಪೂರ್ಣರಾಗುತ್ತಾರೆ. ಇದರೊಂದಿಗೆ ಸ್ಪರ್ಧಾತ್ಮಕ ಪರೀಕ್ಷೆಗಳ ಪೂರ್ವಸಿದ್ಧತಾ ಪರೀಕ್ಷೆ ನಡೆಸಲಾಗುತ್ತದೆ. ವಿಜ್ಞಾನದ ಕ್ಷೇತ್ರದಲ್ಲಿ ಸಾಧನೆಯ ಹಂಬಲದ ವಿದ್ಯಾರ್ಥಿಗಳಿಗೆ ಅತ್ಯುತ್ತಮ ಆಯ್ಕೆ ಎಕ್ಸಲೆಂಟ್ ಪದವಿ ಪೂರ್ವ ಕಾಲೇಜು ಸುಣ್ಣಾರಿ. ಕುಂದಾಪುರ ತಾಲೂಕು.

ವಿದ್ಯಾರ್ಥಿಗಳಿಗೆ ಮಾಹಿತಿಯನ್ನು ತುಂಬುವುದಿಲ್ಲ. ಬದಲಾಗಿ ಮನಸ್ಸನ್ನು ಎಲ್ಲಾ ವಿಚಾರಗಳಿಗೆ ತೆರೆಯುವಂತೆ ಮಾಡುವುದರಲ್ಲಿ ಕಾಲೇಜು, ಆಡಳಿತ ಮಂಡಳಿ ಶ್ರಮಿಸುತ್ತಿದೆ ಎನ್ನುವುದು ಎಂ.ಎಂ.ಹೆಗ್ಡೆ ಎಜ್ಯುಕೇಶನ್ ಮತ್ತು ಚಾರಿಟೇಬಲ್ ಟ್ರಸ್ಟ್‌ನ ಚೇರ್‌ಮ್ಯಾನ್ ಮೊಳಹಳ್ಳಿ ಮಹೇಶ್ ಹೆಗ್ಡೆಯವರ ಹೃದಯಾಳದ ಮಾತು.

ಕಾಲೇಜು ಆರಂಭವಾದ ವರ್ಷದಿಂದ'ಲೇ ಕಾಲೇಜು ವಿದ್ಯಾರ್ಥಿಗಳ, ಪೋಷಕರ ಮೆಚುಗೆಯ ಮಾತುಗಳಿಂದ, ಪ್ರೋತ್ಸಾಹ'ದಿಂದ ದೊಡ್ಡ ಶಿಕ್ಷಣ ಸಂಸ್ಥೆಯಾಗಿ ಬೆಳೆಯಲು ಸಹಕರಿಸಿದ ಎಲ್ಲಾ ಶಿಕ್ಷಣಾಭಿಮಾನಿಗಳನ್ನು ಮಹೇಶ್ ಹೆಗ್ಡೆ ಸ್ಮರಿಸಿಕೊಳ್ಳುತ್ತಾರೆ. ಸಂಸ್ಥೆಯ ಯಶೋಗಾಥೆ ಯಲ್ಲಿ ಕರೆಸ್ಪಾಂಡೆಂಟ್ ಚಿತ್ರಾ ಕಾರಂತ್ ಮತ್ತು ಸಂಸ್ಥೆಯ ಸರ್ವ ಪ್ರಾಧ್ಯಾಪಕರ ಸಹಕಾರವನ್ನು ನೆನೆಯುತ್ತಾರೆ.